# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಕೆಂಪೇಗೌಡನಗರ ಉಪವಿಭಾಗ,
ಬೃ.ಬೆಂ.ಮ.ಪಾಲಿಕೆ ಹೆಚ್. ಸಿದ್ದಯ್ಯ ರಸ್ತೆ, ಬೆಂಗಳೂರು

ಸಂಖ್ಯೆ:ಸ.ಇಂ/ವಾ–118/ವಾರ್ಡ್ ಸಭೆ/2021–22 ದಿನಾಂಕ: 04/12/21

## ವಾರ್ಡ್ –118ರ ವಾರ್ಡ್ ಸಭೆಯ ನಡವಳಿ

ದಿನಾಂಕ:30–11–2021 ರಂದು ಕೆಂಪೇಗೌಡನಗರ ಉಪವಿಭಾಗ ವಾರ್ಡ್–118ರ ವಾರ್ಡ್ ಕಛೇರಿಯಲ್ಲಿ ಶ್ರೀ. ಹೆಚ್.ಎನ್.ರಘು ವಾರ್ಡ್118 ರ ನೋಡಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭಾ ನಡವಳಿಗಳು.

ಹಾಜರಿದವರು:–

| ಕ್ರ ಸಂ. | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| 1 | ಶ್ರೀ.ಹೆಚ್.ಎನ್.ರಘು | ನೋಡಲ್ ಅಧಿಕಾರಿಗಳು | 8277030479 |
| 2 | ಶ್ರೀ.ಕೆ.ಎಸ್.ವಿಜಯ್‌ಕುಮಾರ್ | ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ:118 | 9480688118 |
| 3 | ಶ್ರೀಮತಿ. ಚಂದ್ರಕಾಂತ್ | ಸಹಾಯಕ ಕಂದಾಯ ಅಧಿಕಾರಿ | 9480684432 |
| 4 | ಶ್ರೀ.ಆರ್.ವೀರಯ್ಯ | ಕಿರಿಯ ಆರೋಗ್ಯ ಪರಿವೀಕ್ಷಕರು | 9844859560 |
| 5 | ಶ್ರೀ.ಶ್ರೀನಿವಾಸ್ | ಸ್ಥಳೀಯರು | 9343381555 |
| 6 | ಶ್ರೀಮತಿ. ಚಂದ್ರಕಾಂತ್ | ಸಹಾಯಕ ಕಂದಾಯ ಅಧಿಕಾರಿ | 9480684432 |
| 7 | ಶ್ರೀ. ಜಿ.ಕೆ.ಗಣಪತ್ | ಸ್ಥಳೀಯರು | 8761836246 |
| 8 | ಶ್ರೀ.ಜಾಕ್ | ವಿನೋಭನಗರ ಸ್ಥಳೀಯರು | 9741912926 |
| 9 | ಶ್ರೀ.ರವಿ | ವಿನೋಭನಗರ ಸ್ಥಳೀಯರು | 990051478 |

ಮಾನ್ಯ ಅಧ್ಯಕ್ಷರು, ಮೇಲ್ಕಂಡ ಎಲ್ಲರನ್ನು ಸ್ವಾಗತದೊಂದಿಗೆ ಪರಸ್ಪರ ಪರಿಚಯ ಮಾಡಿಕೊಳ್ಳಲು ತಿಳಿಸುತ್ತಾ ಸಭೆಯನ್ನು ಪ್ರಾರಂಭಿಸಲಾಯಿತು.

ಮೊದಲಿಗೆ ಶ್ರೀ.ಶ್ರೀನಿವಾಸ್ ಸ್ಥಳೀಯರು ಸುಧಾಮನಗರ ವಾರ್ಡಿನಲ್ಲಿ ಬೆಳಿಗ್ಗೆ 5.00 ಗಂಟೆಗೆ ಬಾರ್‌ಗಳು ತೆಗೆಯುತ್ತಿದ್ದು, ಇದರಿಂದಾಗಿ ತರಕಾರಿ ಮಾರ್ಕೆಟ್ ಹಾಗೂ ಸುತ್ತಮುತ್ತಲಿನ ಕೆಲಸ ಮಾಡುವವರು ಬೆಳಿಗ್ಗೆ ಜಾವದಲ್ಲಿಯೇ ಕುಡುತ್ತಿರುವುದರಿಂದ ಸ್ಥಳೀಯರಿಗೆ ತುಂಬಾ ತೊಂದರೆ ಉಂಟಾಗುತ್ತಿರುವುದರಿಂದ ಹಾಗೂ ಸುಧಾಮನಗರ ಸುತ್ತಮುತ್ತಲಿನಲ್ಲಿ ಅನಧಿಕೃತ ಪಿ.ಜಿ ನಡೆಯುತ್ತಿದ್ದು, ಆರೋಗ್ಯ ಇಲಾಖೆಯಿಂದ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಸಭೆ ತಿಳಿಸಿದರು. ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಸಂಬಂಧಿಸಿದ ಪೊಲೀಸ್ ಇಲಾಖೆಗೆ

ಹಾಗೂ ಆರೋಗ್ಯವೈದ್ಯಾಧಿಕಾರಿಗಳಿಗೆ ಕಛೇರಿಗಳಿಗೆ ಪತ್ರ ಬರೆಯುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

ನಂತರ ಶ್ರೀ.ಶ್ರೀನಿವಾಸ್ ಸ್ಥಳೀಯರು ಎಂ.ಟಿ.ಬಿ.ರಸ್ತೆ, ಜರ್ನಲಿಸ್ಟ್ ಕಾಲೋನಿ, ವಿ.ವಿ.ರಸ್ತೆ ಗಳಲ್ಲಿ ವಾಹನಗಳನ್ನು ಎರಡು ಬದಿಯಲ್ಲಿ ನಿಲ್ಲಿಸುತ್ತಿರುವುದರಿಂದ ಸಾರ್ವಜನಿಕರಿಗೆ ಪಾದಚಾರಿ ರಸ್ತೆಯಲ್ಲಿ ಓಡಾಡಲು ತುಂಬಾ ತೊಂದರೆ ಉಂಟಾಗಿರುತ್ತದೆ ಹಾಗೂ ರಸ್ತೆಗಳಲ್ಲಿ ವಾಹನ ಸಂಚಾರಕ್ಕೆ ತುಂಬಾ ತೊಂದರೆ ಉಂಟಾಗಿರುತ್ತದೆ. ಈ ವಿಷಯವಾಗಿ ನೋಡಲ್ ಅಧಿಕಾರಿಗಳು ಸಂಬಂಧಿಸಿದ ವಿ.ವಿ.ಪುರಂ ಸಂಚಾರಿ ಪೊಲೀಸ್ ಇಲಾಖೆಗೆ ಪತ್ರ ಬರೆಯುವಂತೆ ಸಹಾಯಕ ಅಭಿಯಂತರರಿಗೆ ಸೂಚಿಸಿದರು.

ನಂತರದಲ್ಲಿ ಶ್ರೀ.ರವಿ ಸ್ಥಳೀಯರು ಮಾತನಾಡಿ ರಫೆರಲ್ ಆಸ್ಪತ್ರೆಯ ಸುತ್ತಮುತ್ತಲಿನಲ್ಲಿ ನಿಲ್ಲಿಸಿರುವ ವಾಹನಗಳನ್ನು ತೆರವುಗೊಳಿಸಿರುವುದಿಲ್ಲ, ರಾಜಕಾಲುವೆ ಹೂಳನ್ನು ತೆಗೆದು ಸ್ಥಳದಲ್ಲಿಯೇ ಬಿಟ್ಟಿರುವುದರಿಂದ ಸ್ಥಳೀಯರಿಗೆ ತುಂಬಾ ತೊಂದರೆ ಉಂಟಾಗಿದ್ದು, ಈ ಕೂಡಲೇ ತೆರವುಗೊಳಿಸುವಂತೆ ಸಭೆಯಲ್ಲಿ ಕೋರಿದರು, ಮತ್ತು ಹೋಟಲ್ ಹಾಗೂ ಅಂಗಡಿಯವರು ಪ್ಲಾಸ್ಟಿಕ್ ಕವರ್‌ಗಳನ್ನು ಬಳಸುತ್ತಿದ್ದು, ಇದನ್ನು ನಿಯಂತ್ರಸಲು ಆರೋಗ್ಯ ಇಲಾಖೆಯಿಂದ ಯಾವುದೇ ಕ್ರಮ ತೆಗೆದುಕೊಂಡಿರುವುದಿಲ್ಲವೆಂದು ಸಭೆ ತಿಳಿಸಿದರು. Spring ಹೋಟಲ್ ಹತ್ತಿರ ಹಾಗೂ ರಫರಲ್ ಆಸ್ಪತ್ರಯ ಹತ್ತಿರ ಸಂಚಾರಿ ಪೊಲೀಸ್ ರವರನ್ನು ನಿಲ್ಲಿಸಬೇಕೆಂದು ಸಭೆಯಲ್ಲಿ ಕೋರಿದರು, ಹಾಗೂ ಸಿದ್ದಯ್ಯರಸ್ತೆ ದರ್ಗ ಎದುರನಲ್ಲಿ ನೂತನವಾಗಿ ಮೋರಿಯನ್ನು ನಿರ್ಮಿಸಲು ಕೋರಿರುತ್ತಾರೆ.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಭೆಗೆ ಎಲ್ಲಾ ಅಧಿಕಾರಿಗಳಿಗೆ ವಾರ್ಡ್ ಸಮಿತಿ ಸಭೆಗೆ ಸಮಯಕ್ಕೆ ಸರಿಯಾಗಿ ಹಾಜರಾಗುವಂತೆ ಸೂಚಿಸಿ, ತಪ್ಪಿದಲ್ಲಿ ಹಾಜರಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಲು ತಿಳಿಸಿರುತ್ತಾರೆ. ಹಾಜರಿದ್ದ ಅಧಿಕಾರಿಗಳಿಗೆ ಸಮನ್ವಯ ಸಾಧಿಸಿಕೊಂಡು ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಸಹಕಾರ ನೀಡುವಂತೆ ಕೋರುತ್ತಾ, ಸಭೆಗೆ ಹಾಜರಿದ್ದ ಎಲ್ಲಾರಿಗೂ ವಂದನೆಗಳನ್ನು ಅರ್ಪಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

04/12/21.

ಕಾರ್ಯದರ್ಶಿಗಳು ಹಾಗೂ
ಸಹಾಯಕ ಅಭಿಯಂತರರು
ವಾರ್ಡ್ -118 ಸುಧಾಮನಗರ

ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 118